ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	843 (978)
ಮಾನ್ಯ ಸದಸ್ಯರ ಹೆಸರು	ಎಸ್. ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ	20/09/2021.
ಉತ್ತರಿಸಬೇಕಾದ ಸಚಿವರು	ಮಾನ್ಯ ಆರೋಗ್ಯ & ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಗದಗ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ದಿನಾಂಕ: 16.09.2020 ಹಾಗೂ 02.03.2021 ರಂದು ಅಸಿಸ್ಟೆಂಟ್ ಪ್ರೊಫೆಸರ್, ಅಸೋಸಿಯೇಟ್ ಪ್ರೋಫೆಸರ್ ಹಾಗೂ ಪ್ರೋಫೆಸರ್ ಗಳ ಒಟ್ಟು ಎಷ್ಟು ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆಸಲಾಗಿದೆ; (ಸಂಪೂರ್ಣ ವಿವರ ನೀಡುವುದು)	ಗದಗ ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿ ದಿನಾಂಕ:16.09.2020 ರಂದು ನಡೆದ ನೇಮಕಾತಿ ಪ್ರಕ್ರಿಯೆಯಲ್ಲಿ ವಿವಿಧ ವಿಭಾಗಗಳಿಗೆ ಸಂಬಂಧಿಸಿದಂತೆ 03-ಪ್ರಾಧ್ಯಾಪಕರು, 03-ಸಹ ಪ್ರಾಧ್ಯಾಪಕರು ಹಾಗೂ 09 ಸಹಾಯಕ ಪ್ರಾಧ್ಯಾಪಕರುಗಳ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿರುತ್ತದೆ. ಸದರಿ ನೇಮಕಾತಿಯ ವಿವರಗಳಿಗೆ ಸಂಬಂಧಿಸಿದಂತೆ ದಿನಾಂಕ:16.09.2020 ರಂದು ಹೊರಡಿಸಿರುವ ನೇಮಕಾತಿ ಅಧಿಸೂಚನೆಯ ಪತ್ರಿಕಾ ಪ್ರಕಟಣೆಯನ್ನು ಅನುಬಂಧ-1 ರಲ್ಲಿ ಒದಗಿಸಿದೆ. ಹಾಗೆಯೇ, ದಿನಾಂಕ:02.03.2021 ರಂದು ನಡೆದ ನೇಮಕಾತಿ ಪ್ರಕ್ರಿಯೆಯಲ್ಲಿ 04-ಪ್ರಾಧ್ಯಾಪಕರು, 08-ಸಹ ಪ್ರಾಧ್ಯಾಪಕರು ಹಾಗೂ 06 ಸಹಾಯಕ ಪ್ರಾಧ್ಯಾಪಕರುಗಳ ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲಾಗಿದ್ದು, ಸದರಿ ನೇಮಕಾತಿಯ ವಿವರಗಳಿಗೆ ಸಂಬಂಧಿಸಿದಂತೆ ದಿನಾಂಕ:02.03.2021 ರಂದು ಹೊರಡಿಸಿರುವ ನೇಮಕಾತಿ ಅಧಿಸೂಚನೆಯ ಪತ್ರಿಕಾ ಪ್ರಕಟಣೆಯನ್ನು ಅನುಬಂಧ-2 ರಲ್ಲಿ ಒದಗಿಸಿದೆ.
ಆ)	ಜಿಮ್ಸ್ ಗದಗ ನಿರ್ದೇಶಕರು ಈ ವಿವಿಧ ಹುದ್ದೆಗಳನ್ನು ತುಂಬಿಕೊಳ್ಳುವಾಗ ಸರ್ಕಾರದ ಅನುಮತಿ ಪಡೆಯಲಾಗಿದೆಯೇ;	ಈ ಮೇಲ್ಕಂಡ ವಿವಿದ ಹುದ್ದೆಗಳನ್ನು ತುಂಬಿಕೊಳ್ಳುವಾಗ ಸಂಸ್ಥೆಯ ನಿರ್ದೇಶಕರು ಸರ್ಕಾರದಿಂದ ಅಧಿಕೃತವಾಗಿ ಕಡತದಲ್ಲಿ ಅನುಮತಿ ಪಡೆದುಕೊಂಡಿರುವುದಿಲ್ಲ.
ಇ)	ಈ ಹುದ್ದೆಗಳ ನೇಮಕಾತಿ ಸಂದರ್ಶನದ ಕಾಲಕ್ಕೆ ಸಂಬಂಧಪಟ್ಟ ಯಾವ ಅಧಿಕಾರಿಗಳು ಹಾಜರಾಗಿದ್ದರು; (ವಿವರ ನೀಡುವುದು)	ದಿನಾಂಕ:16.09.2020ರ ನೇಮಕಾತಿ ಸಂದರ್ಶನದಲ್ಲಿ ಪ್ರಧಾನ ಕಾರ್ಯದರ್ಶಿಗಳು ವೈದ್ಯಕೀಯ ಶಿಕ್ಷಣ ಇಲಾಖೆ ಇವರ ಪರವಾಗಿ ಡಾ|| ಮಹೇಶ ದೇಸಾಯಿ, ನಿರ್ದೇಶಕರು, ಡಿಮಾನ್ಸ್, ಧಾರವಾಡ ರವರು, ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಇವರ ಪರವಾಗಿ ಡಾ|| ವಿ. ಈಟಗಿ, ನಿರ್ದೇಶಕರು ಕಿಮ್ಸ್. ಕೊಪ್ಪಳ ಇವರು ಮತ್ತು ರಿಜಿಸ್ಟ್ರಾರ್, ಆರ್.ಜಿ.ಯು.ಎಚ್.ಎಸ್ ಇವರ ಪರವಾಗಿ ಶ್ರೀ ರುದ್ರೇಶ ಎಸ್. ಎನ್. ಇವರು ಹಾಗೂ ಸಂಬಂಧಪಟ್ಟ ವಿಷಯ ತಜ್ಞರುಗಳ ಉಪಸ್ಥಿತಿಯಲ್ಲಿ ಸಂದರ್ಶನವನ್ನು ನಡೆಸಲಾಗಿರುತ್ತದೆ. ದಿನಾಂಕ:02.03.2021 ರ ನೇಮಕಾತಿ ಸಂದರ್ಶನದಲ್ಲಿ ಪ್ರಧಾನ ಕಾರ್ಯದರ್ಶಿಗಳು ವೈದ್ಯಕೀಯ ಶಿಕ್ಷಣ ಇಲಾಖೆ ಇವರ ಪರವಾಗಿ ಡಾ|| ಮಹೇಶ ದೇಸಾಯಿ, ನಿರ್ದೇಶಕರು, ಡಿಮಾನ್ಸ್, ಧಾರವಾಡ ಇವರು, ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, ಇವರ ಪರವಾಗಿ ಡಾ|| ಸೂರ್ಯಕಾಂತ ಕಲ್ಲೂರಾಯ, ಪ್ರಾಧ್ಯಾಪಕರು ಹಾಗೂ ವಿಭಾಗ ಮುಖ್ಯಸ್ಥರು, ಎಲುಬು ಇವರು ಮತ್ತು ಕೀಲು ವಿಭಾಗ, ಕರ್ನಾಟಕ ವೈದ್ಯಕೀಯ

		ವಿಜ್ಞಾನಗಳ ಸಂಸ್ಥೆ ಹುಬ್ಬಳ್ಳಿ ಇವರು, ರಿಜಿಸ್ಟ್ರಾರ್ ಆರ್.ಜಿ.ಯು.ಎಚ್.ಎಸ್ ಇವರ ಪರವಾಗಿ ಡಾ|| ಕೆ ಎಫ್. ಕಮ್ಮಾರ, ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು, ಶರೀರ ಕ್ರೀಯಾ ಶಾಸ್ತ್ರ ವಿಭಾಗ, ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ ಇವರು ಹಾಗೂ ಸಂಬಂಧಪಟ್ಟ ವಿಷಯ ತಜ್ಞರುಗಳ ಉಪಸ್ಥಿತಿಯಲ್ಲಿ ಸಂದರ್ಶನವನ್ನು ನಡೆಸಲಾಗಿರುತ್ತದೆ.
ಈ)	ಎರಡು ಹಂತಗಳಲ್ಲಿ ನಡೆದ ವಿವಿಧ ನೇಮಕಾತಿಗಳಲ್ಲಿ ವಿವಿಧ ಹುದ್ದೆಗಳಿಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ ಇಲಾಖೆ ಇವರು ಅನುಮೋದನೆ ನೀಡಿದ್ದಾರೆಯೇ; ಇಲ್ಲವಾದಲ್ಲಿ ಕಾರಣಗಳೇನು? (ಮಾಹಿತಿ ನೀಡುವುದು)	ಆರ್ಥಿಕ ಇಲಾಖೆಯು ಸುತ್ತೋಲೆ ಸಂಖ್ಯೆ:ಆಇ 03 ಬಿಎಎಂ 2020, ದಿನಾಂಕ:06.07.2020 ರಲ್ಲಿ ರಾಜ್ಯದಲ್ಲಿ ಕೋವಿಡ್-19 ನಿಂದ ಉಂಟಾದ ಆರ್ಥಿಕ ಪರಿಸ್ಥಿತಿಯನ್ನು ನಿಭಾಯಿಸಿ ಆರ್ಥಿಕ ಸ್ಥಿತಿಯನ್ನು ಸುಸ್ಥಿತಿಗೆ ತರುವ ನಿಟ್ಟಿನಲ್ಲಿ ಸಂಪನ್ಮೂಲವನ್ನು ಕ್ರೋಢೀಕರಿಸಲು 2020-21ನೇ ಸಾಲಿನ ಆರ್ಥಿಕ ವರ್ಷದಲ್ಲಿ ಎಲ್ಲಾ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವುದನ್ನು ತಡೆಹಿಡಿಯಲಾಗಿತ್ತು. ಈ ಹಿನ್ನೆಲೆಯಲ್ಲಿ, ಗದಗ ವೈದ್ಯಕೀಯ ವಿಜ್ಞಾನ ಸಂಸ್ಥೆಯು ಎರಡು ಹಂತಗಳಲ್ಲಿ ನಡೆಸಿರುವ ವಿವಿಧ ವೃಂದದ ಹುದ್ದೆಗಳ ನೇಮಕಾತಿಗೆ ಆರ್ಥಿಕ ಇಲಾಖೆಯ ಸಹಮತಿ ಪಡೆಯದಿರುವ ಕಾರಣ ನಿರ್ದೇಶಕರು, ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಇವರು ದಿನಾಂಕ:16.09.2020 ಹಾಗೂ ದಿನಾಂಕ:02.03.2021 ರಂದು ವಿವಿಧ ಹುದ್ದೆಗಳಿಗೆ ಸಂಬಂಧಿಸಿದಂತೆ ನಡೆಸಿರುವ ನೇಮಕಾತಿ ಕುರಿತು ಸಲ್ಲಿಸಿರುವ ಪ್ರಸ್ತಾವನೆಗಳಿಗೆ ಆರ್ಥಿಕ ಇಲಾಖೆಯ ಸಹಮತಿ ಕೋರಲಾಗಿದೆ. ಆರ್ಥಿಕ ಇಲಾಖೆಯು ಸಹಮತಿ ನೀಡಿದ ನಂತರ ಸರ್ಕಾರದ ಅನುಮೋದನೆ ನೀಡಲು ಕ್ರಮ ಕೈಗೊಳ್ಳಲಾಗುವುದು.

ಕಡತ ಸಂ: ಎಂಇಡಿ 330 ಎಂ ಎಸ್ ಎಫ್ 2021

(ಡಾ|| ಕೆ. ಸುಧಾಕರ್)
ಆರೋಗ್ಯ & ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು.

ಅನುಬಂಧ - 1

ಕರ್ನಾಟಕ ಸರ್ಕಾರ

ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ. ಮುಳಗುಂದ ರಸ್ತೆ, ಮಲ್ಲಸಮುದ್ರ ಗದಗ - 582103

E-mail : gimsgadag@gmail.com Web site : gimsgadag.org / www.karnataka.gov.in / gimsgadag

ಸಂಖ್ಯೆ: ಜಿಮ್ಸ್/ಜಿ/ಡಿ [illegible] 9/2020-21 ದಿನಾಂಕ: 16.09.2020

ನೇಮಕಾತಿ ಅಧಿಸೂಚನೆ

ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ [illegible] ಹುದ್ದೆಗಳಿಗೆ [illegible] ದಿನಾಂಕ: 26.09.2020 [illegible] ಸಾಯಂಕಾಲ 4.00 ಗಂಟೆ [illegible] ಹೆಚ್ಚಿನ ಮಾಹಿತಿಗಾಗಿ ಸಂಸ್ಥೆಯ ವೆಬ್‌ಸೈಟ್‌ನಲ್ಲಿ (www.karnataka.gov.in/gimsgadag) [illegible] ಸಂಸ್ಥೆಯ ಅಂತರ್ಜಾಲದಲ್ಲಿ ಪ್ರಕಟಿಸಲಾಗುವುದು.

ಕ್ರ. ಸಂ	ಹುದ್ದೆಗಳು	ಹುದ್ದೆಗಳ ಸಂಖ್ಯೆ	ವಿವರ	ಮೀಸಲಾತಿ
1	ಪ್ರಾಧ್ಯಾಪಕರು	3	[illegible]	STG CAT1G 2AG
2	ಸಹ ಪ್ರಾಧ್ಯಾಪಕರು	3	[illegible]	3BG 2AR HK-STG
3	ಸಹಾಯಕ ಪ್ರಾಧ್ಯಾಪಕರು	9	[illegible]	CAT1W 2BW GMW 3BR GMR SCW CAR SCW 2AW SCG HKGMG
4	[illegible]	2	[illegible]	CONTRACT BASIS
5	ಕಿರಿಯ ಸ್ಥಾನಿಕ ವೈದ್ಯರು	52	[illegible]	CONTRACT BASIS
6	ಟ್ಯೂಟರ್	09	[illegible]	
	Total	78		

(1) [illegible] ರೂ. 500 [illegible] 26.09.2020 ಸಾಯಂಕಾಲ 4.00 ಗಂಟೆಯ [illegible] (2) [illegible] (3) [illegible] (4) [illegible] (5) [illegible] (6) [illegible] (7) [illegible] (8) [illegible]

ಅನುಬಂಧ - 2

ಕರ್ನಾಟಕ ಸರ್ಕಾರ

ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ

ಮುಳಗುಂದ ರಸ್ತೆ, ಮಲ್ಲಸಮುದ್ರ ಗದಗ - 582103
ಇ-ಮೇಲ್: gimsgadag@gmail.com
Web : gimsgadag.org/ www.karnataka.gov.in/gimsgadag

ಸಂಖ್ಯೆ: ಜಿಮ್ಸ್/ದೆ/ಡಿ.ಆರ್.ಸಿ/ಸಿ.ಎಸ್/20/2020-21 ದಿನಾಂಕ : 02.03.2021

ನೇಮಕಾತಿ ಅಧಿಸೂಚನೆ

ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಈ ಕೆಳಕಾಣಿಸಿದ ಗುತ್ತಿಗೆ ಆಧಾರದ ಹುದ್ದೆಗಳಿಗೆ ನಿಗಧಿಪಡಿಸಿದ ನಮೂನೆಯಲ್ಲಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಸಂಬಂಧಪಟ್ಟ ದಾಖಲೆಗಳೊಂದಿಗೆ ದಿನಾಂಕ: 15.03.2021 ಮಧ್ಯಾಹ್ನ 4.00 ಗಂಟೆ ಒಳಗಾಗಿ ನಿರ್ದೇಶಕರ ಕಛೇರಿ ಜಿಮ್ಸ್ ಗದಗ ಇವರಿಗೆ ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು (ಹೆಚ್ಚಿನ ಮಾಹಿತಿಗಾಗಿ ಅಂಚೆ ಮೂಲಕ ಅಥವಾ ಖುದ್ದಾಗಿ ಅರ್ಜಿಯೊಂದಿಗೆ ...) ಸಂಸ್ಥೆಯ ವೆಬ್‌ಸೈಟ್‌ನಲ್ಲಿ (www.karnataka.gov.in/gimsgadag) ನೋಡಬಹುದು. ಸಂದರ್ಶನದ ದಿನಾಂಕವನ್ನು ಸಂಸ್ಥೆಯ ಅಂತರ್ಜಾಲದಲ್ಲಿ ಪ್ರಕಟಿಸಲಾಗುವುದು.

ಕ್ರ.ಸಂ.	ಹುದ್ದೆಗಳು	ಹುದ್ದೆಗಳ ಸಂಖ್ಯೆ
		4
1	ಪ್ರಾಧ್ಯಾಪಕರು	8
2	ಸಹ ಪ್ರಾಧ್ಯಾಪಕರು	6
3	ಸಹಾಯಕ ಪ್ರಾಧ್ಯಾಪಕರು	2
4	[illegible]	2
5	[illegible]	42
6	ಕಿರಿಯ ಸ್ಥಾನಿಕ ವೈದ್ಯರು	05
7	ಟ್ಯೂಟರ್	69
	Total	

ಸಹಿ/- ನಿರ್ದೇಶಕರು
ಗದಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಗದಗ

ವಾಸಾಸಂ/ಗದಗ/.../567/2020-21